# ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು

## (Frequently Asked Questions)

| | | |
|---|---|---|
| 1 | ಪ್ರಶ್ನೆ | **2023–24ರ ಶೈಕ್ಷಣಿಕ ವರ್ಷದಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ವತಿಯಿಂದ ಎಷ್ಟು ಪರೀಕ್ಷೆಗಳನ್ನು ನಡೆಸಲಾಗುತ್ತದೆ?** |
| | ಉತ್ತರ | 2023–24ರ ಶೈಕ್ಷಣಿಕ ವರ್ಷದಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ವತಿಯಿಂದ ಒಟ್ಟು ಮೂರು ಪರೀಕ್ಷೆಗಳನ್ನು ನಡೆಸಲಾಗುತ್ತದೆ, ಇವುಗಳನ್ನು ವಾರ್ಷಿಕ ಪರೀಕ್ಷೆ–1, ಪರೀಕ್ಷೆ–2 ಮತ್ತು ಪರೀಕ್ಷೆ–3 ಎಂದು ಕರೆಯಲಾಗುತ್ತದೆ. |
| 2 | ಪ್ರಶ್ನೆ | **ಮಂಡಲಿಯಿಂದ ನಡೆಸಲಾಗುವ ಪರೀಕ್ಷೆಗಳನ್ನು ವಾರ್ಷಿಕ ಮತ್ತು ಪೂರಕ ಪರೀಕ್ಷೆ ಎಂದು ಕರೆಯಲಾಗುತ್ತದೆಯೇ?** |
| | ಉತ್ತರ | 2023–24ರಿಂದ ಪೂರಕ ಪರೀಕ್ಷೆಗೆ ಬದಲಾಗಿ ವಾರ್ಷಿಕವಾಗಿ ಮೂರು ಪರೀಕ್ಷೆಗಳನ್ನು ನಡೆಸಲಾಗುತ್ತಿದ್ದು, ಸದರಿ ಪರೀಕ್ಷೆಗಳನ್ನು ಕ್ರಮವಾಗಿ ವಾರ್ಷಿಕ ಪರೀಕ್ಷೆ–1, 2 ಮತ್ತು 3 ಎಂದು ಕರೆಯಲಾಗುತ್ತದೆ. |
| 3 | ಪ್ರಶ್ನೆ | **ಮುಖ್ಯ ಪರೀಕ್ಷೆ ಮತ್ತು ಪೂರಕ ಪರೀಕ್ಷೆ ಎಂಬ ಹೆಸರಿನ ಬದಲಾಗಿ ವಾರ್ಷಿಕ ಪರೀಕ್ಷೆ 1, 2, 3 ಎಂದು ಬದಲಾಯಿಸಿರುವುದರ ಉದ್ದೇಶವೇನು?** |
| | ಉತ್ತರ | ಪೂರಕ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಉಂಟಾಗುತ್ತಿದ್ದ ಕೀಳರಿಮೆಯನ್ನು ನಿವಾರಿಸುವುದು ಹಾಗೂ ಒಂದು ಹೆಚ್ಚುವರಿ ಪರೀಕ್ಷೆಯಾಗಿ ಪರೀಕ್ಷೆ–3ನ್ನು ನಡೆಸುವುದರ ಮೂಲಕ ವಿದ್ಯಾರ್ಥಿಗಳಿಗೆ ಒಂದು ಶೈಕ್ಷಣಿಕ ವರ್ಷದಲ್ಲೇ ಹೆಚ್ಚಿನ ಅವಕಾಶವನ್ನು ಕಲ್ಪಿಸಿ ತೇರ್ಗಡೆಗೊಂಡ ವಿದ್ಯಾರ್ಥಿಗಳು ತಮ್ಮ ಮುಂದಿನ ವಿದ್ಯಾಭ್ಯಾಸಕ್ಕೆ ದಾಖಲಾತಿ ಪಡೆಯಲು ಅನೂಕೂಲ ಮಾಡಿಕೊಡುವುದು. |
| 4 | ಪ್ರಶ್ನೆ | **2023–24ರ ಎಸ್.ಎಸ್.ಎಲ್.ಸಿ. ಪರೀಕ್ಷೆ–1ರ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆಯೇ?** |
| | ಉತ್ತರ | ಹೌದು, ಪ್ರಕಟಿಸಲಾಗಿದೆ. |
| 5 | ಪ್ರಶ್ನೆ | **2023–24ರ ಶೈಕ್ಷಣಿಕ ವರ್ಷದಲ್ಲಿ 10ನೇ ತರಗತಿಯ ಪ್ರಶ್ನೆಪತ್ರಿಕೆಗಳ ವಿನ್ಯಾಸ ಬದಲಾಗಿದೆಯೇ?** |
| | ಉತ್ತರ | ಇಲ್ಲ, 2022–23ರ ಪ್ರಶ್ನೆಪತ್ರಿಕೆಯ ಮಾದರಿಯನ್ನೇ 2023–24ನೇ ಸಾಲಿನಲ್ಲೂ ಮುಂದುವರೆಸಲಾಗಿದೆ. |
| 6 | ಪ್ರಶ್ನೆ | **2023–24ರ ಮೂರು ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಏಕರೂಪತೆಯನ್ನು ಹೊಂದಿರುತ್ತವೆಯೇ?** |
| | ಉತ್ತರ | ಹೌದು. ಮೂರು ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳ ವಿಷಯ ಮತ್ತು ಕಠಿಣತೆಯ ಮಟ್ಟದಲ್ಲಿ ಏಕರೂಪತೆ ಇರುತ್ತವೆ |
| 7 | ಪ್ರಶ್ನೆ | **ಪರೀಕ್ಷೆ–1ಕ್ಕೆ ಗೈರುಹಾಜರಾದ ವಿದ್ಯಾರ್ಥಿಗಳು ಪರೀಕ್ಷೆ–2 ಮತ್ತು ಪರೀಕ್ಷೆ–3ನ್ನು ತೆಗೆದುಕೊಳ್ಳಬಹುದೇ?** |
| | ಉತ್ತರ | ಹೌದು, ಪರೀಕ್ಷೆ ತೆಗೆದುಕೊಳ್ಳಬಹುದು. |
| 8 | ಪ್ರಶ್ನೆ | **ಎಲ್ಲಾ ವಿದ್ಯಾರ್ಥಿಗಳು ಎಲ್ಲಾ ಮೂರು ಪರೀಕ್ಷೆಗಳನ್ನು ಬರೆಯುವುದು ಕಡ್ಡಾಯವೇ?** |
| | ಉತ್ತರ | ಇಲ್ಲ, ಪರೀಕ್ಷೆ–1 ಕ್ಕೆ ನೋಂದಾಯಿಸುವುದು ಕಡ್ಡಾಯ. ವಿದ್ಯಾರ್ಥಿಗಳು ತಾವು ಇಚ್ಛಿಸಿದ ಪರೀಕ್ಷೆಗೆ ಹಾಜರಾಗಿ ಪರೀಕ್ಷೆ ಬರೆಯಬಹುದು. |
| 9 | ಪ್ರಶ್ನೆ | **2022–23 ಮತ್ತು ಅದಕ್ಕಿಂತ ಹಿಂದಿನ ಸಾಲಿನ ವಿದ್ಯಾರ್ಥಿಗಳು 2023–24ರ ಪರೀಕ್ಷೆ–1ಕ್ಕೆ ಹಾಜರಾಗುವುದು ಕಡ್ಡಾಯವೇ?** |
| | ಉತ್ತರ | ಇಲ್ಲ, 2022–23 ಮತ್ತು ಹಿಂದಿನ ಸಾಲಿನ ವಿದ್ಯಾರ್ಥಿಗಳು ಶುಲ್ಕ ಪಾವತಿಸಿ ಪರೀಕ್ಷೆ–1, 2 ಮತ್ತು 3ರಲ್ಲಿ ಯಾವುದಾದರೂ ಪರೀಕ್ಷೆಗೆ ಹಾಜರಾಗಬಹುದು. |
| 10 | ಪ್ರಶ್ನೆ | **ಪರೀಕ್ಷೆ–1ರಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪುನ: ಪರೀಕ್ಷೆ ಬರೆಯಲು ಎಷ್ಟು ಅವಕಾಶಗಳಿರುತ್ತವೆ?** |
| | ಉತ್ತರ | ಪರೀಕ್ಷೆ–1ರಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪುನ: ಪರೀಕ್ಷೆ ಬರೆಯಲು ಪರೀಕ್ಷೆ–1 ಸೇರಿದಂತೆ ಒಟ್ಟು ಸತತ ಆರು (06) ಅವಕಾಶಗಳಿರುತ್ತವೆ. |

| | | |
|---|---|---|
| 11 | ಪ್ರಶ್ನೆ | **ಆರು ಪ್ರಯತ್ನಗಳು ಮುಕ್ತಾಯವಾದ ನಂತರ ಪುನಃ ಪರೀಕ್ಷೆಗೆ ನೋಂದಾಯಿಸಿಕೊಳ್ಳುವ ಅವಕಾಶವಿದೆಯೇ?** |
| | ಉತ್ತರ | ಹೌದು, ಅವಕಾಶವಿದೆ. ಆರು ಪ್ರಯತ್ನಗಳು ಮುಕ್ತಾಯವಾದ ನಂತರ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು, ಸದರಿ ಸಂದರ್ಭದಲ್ಲಿ ಚಾಲ್ತಿಯಲ್ಲಿರುವ ಪಠ್ಯಕ್ರಮವನ್ನು ವ್ಯಾಸಂಗ ಮಾಡಿ, ಪರೀಕ್ಷೆಗೆ ಹಾಜರಾಗಬಹುದು. |
| 12 | ಪ್ರಶ್ನೆ | **ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ಶಾಲಾ ವಿದ್ಯಾರ್ಥಿಗಳಿಗೆ ಶೇ.75ರಷ್ಟು ಹಾಜರಾತಿ ಕಡ್ಡಾಯವೇ?** |
| | ಉತ್ತರ | ಹೌದು. ಶೇ.75ರಷ್ಟು ಹಾಜರಾತಿ ಕಡ್ಡಾಯವಾಗಿರುತ್ತದೆ. |
| 13 | ಪ್ರಶ್ನೆ | **ಪರೀಕ್ಷೆ–1ರಲ್ಲಿ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿ, ಪರೀಕ್ಷೆ–2 ಅಥವಾ ಪರೀಕ್ಷೆ–3ರಲ್ಲಿ ಉಳಿದ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ ಏನೆಂದು ನಮೂದಾಗುವುದು?** |
| | ಉತ್ತರ | ಅಂತಿಮವಾಗಿ ಎಲ್ಲಾ ವಿಷಯಗಳಲ್ಲೂ ಉತ್ತೀರ್ಣಗೊಂಡ ಪರೀಕ್ಷೆಯ ಮಾಹೆ ಮತ್ತು ಪರೀಕ್ಷೆಯ ಸಂಖ್ಯೆಯನ್ನು ಅಂಕಪಟ್ಟಿಯಲ್ಲಿ ನಮೂದಿಸಲಾಗುವುದು. |
| 14 | ಪ್ರಶ್ನೆ | **ಪರೀಕ್ಷೆ–1ರಲ್ಲಿ ತೇರ್ಗಡೆ ಹೊಂದಿದ ವಿಷಯಗಳ ಫಲಿತಾಂಶವನ್ನು/ಅಂಕಗಳನ್ನು ಉತ್ತಮಪಡಿಸಿಕೊಳ್ಳಲು ಅವಕಾಶವಿದೆಯೇ?** |
| | ಉತ್ತರ | ಅವಕಾಶವಿದೆ. ಪರೀಕ್ಷೆ–1ರಲ್ಲಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಯು ಎರಡು ವರ್ಷಗಳ ಅವಧಿಯಲ್ಲಿ ವಿದ್ಯಾರ್ಥಿಯು ಇಚ್ಛಿಸಿದಲ್ಲಿ ಪರೀಕ್ಷೆಗೆ ಹಾಜರಾಗಿ ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಬಹುದಾಗಿದ್ದು, ಅಂತಿಮವಾಗಿ ವಿದ್ಯಾರ್ಥಿ ಗಳಿಸುವ ಅತ್ಯುತ್ತಮ ಅಂಕಗಳನ್ನು ಅಂಕಪಟ್ಟಿಯಲ್ಲಿ ನಮೂದಿಸಲಾಗುವುದು. |
| 15 | ಪ್ರಶ್ನೆ | **ವಿದ್ಯಾರ್ಥಿಗಳು ಆಂತರಿಕ ಮೌಲ್ಯಮಾಪನದಲ್ಲಿ ಪಡೆದ ಅಂಕಗಳನ್ನು ಉತ್ತಮಪಡಿಸಿಕೊಳ್ಳಲು ಅವಕಾಶವಿದೆಯೇ?** |
| | ಉತ್ತರ | ಇಲ್ಲ. ಒಮ್ಮೆ ಆಂತರಿಕ ಮೌಲ್ಯಮಾಪನದಲ್ಲಿ ಪಡೆದ ಅಂಕಗಳನ್ನು ಉತ್ತಮಪಡಿಸಿಕೊಳ್ಳಲು ಅವಕಾಶವಿಲ್ಲ. |
| 16 | ಪ್ರಶ್ನೆ | **ಪರೀಕ್ಷೆ–1ರಲ್ಲಿ ತೇರ್ಗಡೆ ಹೊಂದಿ ಪರೀಕ್ಷೆ–2 ಮತ್ತು 3ನೇ ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸದೇ ಇರುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ಯಾವಾಗ ವಿತರಿಸಲಾಗುತ್ತದೆ?** |
| | ಉತ್ತರ | ಪರೀಕ್ಷೆ–1ರ ಫಲಿತಾಂಶ ಹಾಗೂ ಮರುಮೌಲ್ಯಮಾಪನ/ಮರುಎಣಿಕೆ ಫಲಿತಾಂಶ ಪ್ರಕಟಿಸಿದ 30 ದಿನಗಳ ನಂತರ ಅಂಕಪಟ್ಟಿಗಳನ್ನು ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರ ಮೂಲಕ ವಿತರಿಸಲಾಗುವುದು. |
| 17 | ಪ್ರಶ್ನೆ | **ಎಲ್ಲಾ ವಿದ್ಯಾರ್ಥಿಗಳು ಮೂರು ಪರೀಕ್ಷೆಗಳಿಗೂ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕೇ?** |
| | ಉತ್ತರ | ಪರೀಕ್ಷೆ–1ರಲ್ಲಿ ತೇರ್ಗಡೆಯಾಗಿ ಪುನ: ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸದ ವಿದ್ಯಾರ್ಥಿಗಳು ಮತ್ತೊಮ್ಮೆ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕಿಲ್ಲ. ಪರೀಕ್ಷೆ–1ರಲ್ಲಿ ಅನುತ್ತೀರ್ಣರಾಗಿ ಅಥವಾ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳು ತಾವು ಬರೆಯುವ ವಿಷಯದ ಪರೀಕ್ಷೆಗೆ ನಿಗದಿತ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. |
| 18 | ಪ್ರಶ್ನೆ | **ಪ್ರತಿ ಪರೀಕ್ಷೆಗೂ ಅಂಕಪಟ್ಟಿ ಶುಲ್ಕವನ್ನು ಪಡೆಯಲಾಗುವುದೇ?** |
| | ಉತ್ತರ | ಪರೀಕ್ಷೆಯಲ್ಲಿ ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ನೀಡುವ ಸಲುವಾಗಿ ಒಂದು ಬಾರಿ ಮಾತ್ರ ನಿಗದಿತ ಶುಲ್ಕವನ್ನು ಪಡೆಯಲಾಗುವುದು. |
| 19 | ಪ್ರಶ್ನೆ | **ಕಲಿಕಾ ನ್ಯೂನತೆ ಮತ್ತು ವಿಕಲಚೇತನ ಮಕ್ಕಳಿಗೆ ಇರುವ ಸೌಲಭ್ಯಗಳೇನು?** |
| | ಉತ್ತರ | ಹಿಂದಿನ ಸಾಲಿನಲ್ಲಿ ನೀಡಲಾಗಿದ್ದ ಎಲ್ಲಾ ಸೌಲಭ್ಯಗಳನ್ನು ಮುಂದುವರೆಸಲಾಗಿದೆ. ಈ ಬಗ್ಗೆ ವಿವರಗಳನ್ನು 2023–24 ನೇ ಸಾಲಿನ ಮಾರ್ಗಸೂಚಿಯಲ್ಲಿ ಗಮನಿಸಬಹುದಾಗಿದೆ |
| 20 | ಪ್ರಶ್ನೆ | **ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ತಮ್ಮ ಮುಂದಿನ ವ್ಯಾಸಂಗಕ್ಕಾಗಿ ತುರ್ತಾಗಿ ಅಂಕಪಟ್ಟಿಯನ್ನು ಪಡೆದುಕೊಳ್ಳಲು ಅವಕಾಶವಿದೆಯೇ?** |
| | ಉತ್ತರ | ಅವಕಾಶವಿದೆ. ಆಯಾ ಪರೀಕ್ಷೆ ಫಲಿತಾಂಶ ಪ್ರಕಟಿಸಿದ ನಂತರ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿಯನ್ನು ಡಿಜಿಲಾಕರ್ ವ್ಯವಸ್ಥೆಯಲ್ಲಿ ಪಡೆಯಬಹುದಾಗಿದೆ. |